# ಕರ್ನಾಟಕ ವಿಧಾನಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 788
ಸದಸ್ಯರ ಹೆಸರು : ಶ್ರೀ ಪ್ರಕಾಶ್ ಕೆ. ರಾಥೋಡ್
(ನಾಮನಿರ್ದೇಶನ ಹೊಂದಿದವರು)
ಉತ್ತರಿಸಬೇಕಾದ ದಿನಾಂಕ : 23-07-2024
ಉತ್ತರಿಸುವ ಸಚಿವರು : ಮಾನ್ಯ ಪೌರಾಡಳಿತ ಮತ್ತು ಹಜ್ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ವಿಜಯಪುರ ಜಿಲ್ಲೆಯ ನಿಡಗುಂದಿ ಪಟ್ಟಣ ಪಂಚಾಯಿತಿಯ ವಾರ್ಡ್‌ಗಳಲ್ಲಿ ಸಿ.ಸಿ. ರಸ್ತೆ, ಚರಂಡಿ ಮತ್ತು ಒಳಚರಂಡಿಗಳನ್ನು ನಿರ್ಮಾಣ ಮಾಡಲಾಗಿದೆಯೇ; (ವಿವರ ನೀಡುವುದು) | ವಿಜಯಪುರ ಜಿಲ್ಲೆಯ ನಿಡಗುಂದಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯ ವಾರ್ಡ್‌ಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಕೈಗೊಳ್ಳಲಾಗಿರುವ ಕಾಮಗಾರಿಗಳ ವಿವರ ಈ ಕೆಳಕಂಡಂತಿದೆ:<br><br>**ನಗರೋತ್ಥಾನ (ಮುನಿಸಿಪಾಲಿಟಿ) ಯೋಜನೆ ಹಂತ-3 ಹಾಗೂ ಅಮೃತ ನಗರೋತ್ಥಾನ (ಮುನಿಸಿಪಾಲಿಟಿ) ಯೋಜನೆ (ಹಂತ-4) ರಡಿ** ಅಭಿವೃದ್ಧಿ ಕಾಮಗಾರಿಗಳಾದ ರಸ್ತೆ, ಚರಂಡಿ ಕಟ್ಟಡ ಹಾಗೂ ಇತ್ಯಾದಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಕಾಮಗಾರಿಗಳ ವಿವರಗಳನ್ನು ಅನುಬಂಧ-1 ರಲ್ಲಿ ನೀಡಿದೆ.<br><br>**15ನೇ ಹಣಕಾಸು ಆಯೋಗದ ಅನುದಾನ**ದಡಿ ನಿಡಗುಂದಿ ಪಟ್ಟಣ ಪಂಚಾಯಿತಿಗೆ ಹಂಚಿಕೆಯಾದ ಶೇಕಡ 40ರಷ್ಟು ಮುಕ್ತ ಅನುದಾನದಡಿ ಕಳೆದ ಮೂರು ವರ್ಷಗಳಲ್ಲಿ ಕೈಗೊಂಡಿರುವ ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿಗಳ ವಿವರಗಳನ್ನು **ಅನುಬಂಧ-2 ರಲ್ಲಿ ನೀಡಿದೆ.**<br><br>ಮುಂದುವರೆದು, ವಿಜಯಪುರ ಜಿಲ್ಲೆಯ ನಿಡಗುಂದಿ ಪಟ್ಟಣ ಪಂಚಾಯಿತಿಯ ವಾರ್ಡ್‌ಗಳಲ್ಲಿ ಸಿ.ಸಿ. ರಸ್ತೆ, ಚರಂಡಿ ಮತ್ತು ಒಳಚರಂಡಿಗಳನ್ನು ವಿವಿಧ ಯೋಜನೆಯಡಿ ಅನುದಾನ ಲಭ್ಯತೆಯನ್ನಾಧರಿಸಿ ಹಾಗೂ ನಗರದ ಅವಶ್ಯಕತೆಗನುಗುಣವಾಗಿ ಹಂತ ಹಂತವಾಗಿ ನಿರ್ಮಾಣ ಮಾಡಲಾಗುತ್ತಿದೆ.<br><br>ನಿಡಗುಂದಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ 16 ವಾರ್ಡುಗಳಲ್ಲಿ ಈಗಾಗಲೇ ಅಂದಾಜು ಒಟ್ಟು 45 ಕಿ.ಮೀ. ಗಳಷ್ಟು ಸಿ.ಸಿ. ರಸ್ತೆ ಮತ್ತು 37 ಕಿ.ಮೀ. ಗಳಷ್ಟು ಸಿ.ಸಿ. ಚರಂಡಿಗಳನ್ನು ನಿರ್ಮಾಣ ಮಾಡಲಾಗಿರುತ್ತದೆ.<br><br>**ಎಸ್.ಎಫ್.ಸಿ. ಮುಕ್ತನಿಧಿ ಯೋಜನೆ**ಯಡಿ 2021-22ನೇ ಸಾಲಿನಿಂದ 2023-24ನೇ ಸಾಲಿನವರೆಗೆ ವಿಜಯಪುರ ಜಿಲ್ಲೆಯ ನಿಡಗುಂದಿ ಪಟ್ಟಣ ಪಂಚಾಯಿತಿಯ ವಾರ್ಡ್‌ಗಳಲ್ಲಿ ಸಿ.ಸಿ. ರಸ್ತೆ, ಚರಂಡಿ ನಿರ್ಮಾಣ ಮಾಡಲಾದ ವಿವರಗಳನ್ನು **ಅನುಬಂಧ-3** ರಲ್ಲಿ ನೀಡಿದೆ.<br><br>**ಸ್ವಚ್ಛ ಭಾರತ ಮಿಷನ್-ನಗರ (2.0) ಯೋಜನೆಯ ಬಳಸಿದ ನೀರಿನ ನಿರ್ವಹಣೆ ಘಟಕದಡಿ** ನಿಡಗುಂದಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಒಳಚರಂಡಿ ನಿರ್ಮಾಣ ಮಾಡಲು ಸರ್ವೆ ಕಾರ್ಯಕೈಗೊಂಡಿದ್ದು, ವಿಸ್ತೃತ ಯೋಜನಾ ವರದಿ (ಡಿ.ಪಿ.ಆರ್) ತಯಾರಿಸುವ ಹಂತದಲ್ಲಿದೆ.<br><br>**ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ:**<br>ವಿಜಯಪುರ ಜಿಲ್ಲೆಯ ನಿಡಗುಂದಿ ಪಟ್ಟಣದಲ್ಲಿ ಸಮರ್ಪಕವಾದ ನೀರು ಸರಬರಾಜು ವ್ಯವಸ್ಥೆಯನ್ನು |

| | | |
|---|---|---|
| | | ಅನುಷ್ಠಾನಗೊಳಿಸಿದ ನಂತರ ಒಳಚರಂಡಿ ಕಾಮಗಾರಿ ಕೈಗೊಂಡಲ್ಲಿ ಮಾತ್ರ ಫಲಪ್ರದವಾಗುವುದು. ಪ್ರಯುಕ್ತ, ಸಮರ್ಪಕ ನೀರು ಸರಬರಾಜು ಯೋಜನೆ ಅಳವಡಿಕೆ ನಂತರ ಒಳಚರಂಡಿ ಯೋಜನೆಗೆ ಮಂಡಳಿಯಿಂದ ಅಂದಾಜನ್ನು ತಯಾರಿಸಿ ಸರ್ಕಾರದ ಆಡಳಿತಾತ್ಮಕ ಅನುಮೋದನೆಗೆ ಸಲ್ಲಿಸಿದ ನಂತರ ನಿಯಮಾನುಸಾರ ಪರಿಶೀಲಿಸಿ ಕೈಗೊಳ್ಳಲಾಗುವುದು. |
| ಆ) | ಸಿ.ಸಿ. ರಸ್ತೆ, ಚರಂಡಿ ಮತ್ತು ಒಳಚರಂಡಿ ನಿರ್ಮಾಣ ಮಾಡಲು ಇನ್ನು ಎಷ್ಟು ವಾರ್ಡ್‌ಗಳು ಬಾಕಿ ಇವೆ; ಇದಕ್ಕೆ ಎಷ್ಟು ಅನುದಾನದ ಅವಶ್ಯಕತೆ ಇದೆ; (ವಿವರ ನೀಡುವುದು) | **<u>ನಗರೋತ್ಥಾನ (ಮುನಿಸಿಪಾಲಿಟಿ) ಯೋಜನೆ ಹಂತ-3 ಹಾಗೂ ಅಮೃತ ನಗರೋತ್ಥಾನ (ಮುನಿಸಿಪಾಲಿಟಿ) ಯೋಜನೆ (ಹಂತ-4) ಹಾಗೂ 15ನೇ ಹಣಕಾಸು ಆಯೋಗದ ಅನುದಾನ:</u>**<br><br>ನಿಡಗುಂದಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ 16 ವಾರ್ಡ್ ಗಳು ಇರುತ್ತವೆ. ಸದರಿ ವಾರ್ಡ್ ಗಳಲ್ಲಿ ಸಿ.ಸಿ ರಸ್ತೆ 80 ಕಿ. ಮೀ ಇರುತ್ತದೆ. ಇದರಲ್ಲಿ 45 ಕಿ.ಮೀ ಸಿ.ಸಿ ರಸ್ತೆ ನಿರ್ಮಿಸಲಾಗಿದೆ. ಬಾಕಿ ಉಳಿದ 35 ಕಿ.ಮೀ ಗಳಷ್ಟು ಸಿ.ಸಿ ರಸ್ತೆಗಳನ್ನು ನಿರ್ಮಿಸಬೇಕಾಗಿರುತ್ತದೆ. ಇದಕ್ಕೆ ಒಟ್ಟು ಮೊತ್ತ ರೂ.2275.00 ಲಕ್ಷಗಳ ಅನುದಾನ ಬೇಕಾಗಿರುತ್ತದೆ.<br><br>ಸಿ.ಸಿ ಚರಂಡಿಗಳು ಒಟ್ಟು 72 ಕಿ. ಮೀ ಗಳಷ್ಟು ಇದ್ದು ಇದರಲ್ಲಿ 37 ಕಿ.ಮೀಗಳಷ್ಟು ಸಿ.ಸಿ ಚರಂಡಿ ನಿರ್ಮಿಸಲಾಗಿದೆ. ಬಾಕಿ ಇರುವ 35 ಕಿ.ಮೀ ಸಿ.ಸಿ ಚರಂಡಿ ನಿರ್ಮಿಸಬೇಕಾಗಿರುತ್ತದೆ. ಅದಕ್ಕೆ ಒಟ್ಟು ಮೊತ್ತ ರೂ.1225.00ಲಕ್ಷಗಳು ಬೇಕಾಗಿರುತ್ತದೆ.<br><br>**<u>ಎಸ್.ಎಫ್.ಸಿ. ಮುಕ್ತನಿಧಿ ಯೋಜನೆ:</u>**<br>ನಿಡಗುಂದಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ 16 ವಾರ್ಡ್‌ಗಳಲ್ಲಿ ಅಂದಾಜು 35 ಕಿ.ಮೀ.ಗಳಷ್ಟು ಸಿ.ಸಿ. ರಸ್ತೆ ಮತ್ತು ಸಿ.ಸಿ. ಚರಂಡಿ ನಿರ್ಮಾಣ ಮಾಡಲು ಅಂದಾಜು ರೂ.35.00 ಕೋಟಿಗಳ ಅನುದಾನದ ಅವಶ್ಯಕತೆ ಇರುತ್ತದೆ. |
| ಇ) | ಪ್ರಸ್ತುತ ಸಾಲಿನಲ್ಲಾದರೂ ಅನುದಾನ ಒದಗಿಸಿ ಬಾಕಿಯಿರುವ ಕಾಮಗಾರಿಗಳನ್ನು ಪೂರ್ಣಗೊಳಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ? | **<u>15ನೇ ಹಣಕಾಸು ಆಯೋಗದ ಅನುದಾನ:</u>**<br>2024-25ನೇ ಸಾಲಿನಲ್ಲಿ ನಿಡಗುಂದಿ ಪಟ್ಟಣ ಪಂಚಾಯಿತಿಗೆ 15ನೇ ಹಣಕಾಸು ಆಯೋಗದ ಅನುದಾನದಡಿ ಒಟ್ಟು ಅನುದಾನ ರೂ.75.00ಲಕ್ಷಗಳನ್ನು ಆಯವ್ಯಯದಲ್ಲಿ ಹಂಚಿಕೆ ಮಾಡಲಾಗಿದೆ.<br><br>ಸರ್ಕಾರದಿಂದ ಲಭ್ಯವಾಗುವ ಅನುದಾನದಿಂದ ಹಾಗೂ ನಗರ ಸ್ಥಳೀಯ ಸಂಸ್ಥೆಯ ಸ್ವಂತ ಸಂಪನ್ಮೂಲಗಳಿಂದ ಬಾಕಿ ಕಾಮಗಾರಿಗಳನ್ನು ನಿಡಗುಂದಿ ಪಟ್ಟಣ ಪಂಚಾಯಿತಿಯು ಕೈಗೊಂಡು ಅನುಷ್ಠಾನಗೊಳಿಸಬೇಕಿದೆ.<br>**<u>ಎಸ್.ಎಫ್.ಸಿ. ಮುಕ್ತನಿಧಿ ಯೋಜನೆ:</u>**<br><br>• 2024-25ನೇ ಸಾಲಿನ ಎಸ್.ಎಫ್.ಸಿ. ಮುಕ್ತನಿಧಿ ಯೋಜನೆಯಡಿ ರೂ.27.00 ಲಕ್ಷಗಳನ್ನು ಸರ್ಕಾರದಿಂದ ಹಂಚಿಕೆ ಮಾಡಿದ್ದು, ಮೊದಲ ಕಂತು ರೂ.5.55ಲಕ್ಷಗಳನ್ನು ಬಿಡುಗಡೆ ಮಾಡಲಾಗಿರುತ್ತದೆ.<br>• 2022-23ನೇ ಸಾಲಿನ ಎಸ್.ಎಫ್.ಸಿ. ವಿಶೇಷ ಅನುದಾನದಲ್ಲಿ ರೂ.100.00ಲಕ್ಷಗಳನ್ನು ಸರ್ಕಾರದಿಂದ ಹಂಚಿಕೆ ಮಾಡಲಾಗಿದ್ದು, ಸಿ.ಸಿ. ರಸ್ತೆ ಮತ್ತು ಚರಂಡಿ ನಿರ್ಮಾಣದ 10 ಕಾಮಗಾರಿಗಳಿಗೆ ಅನುಮೋದನೆ ನೀಡಲಾಗಿದ್ದು ಟೆಂಡರ್ ಪ್ರಕ್ರಿಯೆಯ ಹಂತದಲ್ಲಿರುತ್ತದೆ. ವಿವರಗಳನ್ನು **ಅನುಬಂಧ-4** ರಲ್ಲಿ ನೀಡಿದೆ. |

ಸಂಖ್ಯೆ:ನಅಇ 187 ಎಸ್‌ಎಫ್‌ಸಿ 2024

(ರಹೀಂ ಖಾನ್)
ಪೌರಾಡಳಿತ ಹಾಗೂ ಹಜ್ ಸಚಿವರು.